ತೆಗೆದುಕೊಂಡರೆ ಮುಂದೆ ಕೊಡತಕ್ಕಂಥ ದುಡ್ಡು ಸದುಪಯೋಗವಾಗುತ್ತದೆ. ಅವರ ಮೇಲೆ ಶೀಘ್ರ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಈ ಸದನದ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:– ಅದಕ್ಕೋಸ್ಕರ ಈಗ ಇರತಕ್ಕಂಥ ಕಾನೂನಿನಲ್ಲಿ ಸ್ವಲ್ಪ ಬಿಗಿ ಮಾಡಬೇಕಾಗಿದೆ ಮತ್ತು ಇಂತಹ ಅಕ್ರಮ ನಡೆದರೆ ಇದಕ್ಕೆ ಸಾಕಷ್ಟು ಅಧಿಕಾರ ಸರ್ಕಾರಕ್ಕೂ ಕೂಡ ಇರಬೇಕಾಗುತ್ತದೆ. ಈ ರೀತಿ ಅಕ್ರಮಗಳನ್ನು ತಪ್ಪಿಸುವುದಕ್ಕೆ ಕೂಡ ವ್ಯವಸ್ಥೆ ಸರಿಯಾಗಿ ಮಾಡಬೇಕಾಗುತ್ತದೆ. ಪಂಚಾಯತ್ ರಾಜ್ ಬಿಲ್ ಏನಿದೆ, ಅದರಲ್ಲಿ ಇರುವ ಕಾನೂನಿನ ದೋಷಗಳನ್ನು ನಾವು ನಮ್ಮ ಹೊಸ ಬಿಲ್ಲಿನಲ್ಲಿ ಸರಿಪಡಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ.

ರಾಜ್ಯದಲ್ಲಿನ ಗ್ರಾಮ ಸಹಾಯಕರು

(2101): ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಗ್ರಾಮ ಸಹಾಯಕರು ಸೇವೆಯಲ್ಲಿರುವವರ ಸಂಖ್ಯೆ ಎಷ್ಟು;

ಆ. ಅವರಿಗೆ ತಿಂಗಳೊಂದಕ್ಕೆ ನೀಡುವ ಸಂಬಳದ ಮೊತ್ತವೆಷ್ಟು;

ಇ. ಅವರನ್ನು 'ಡಿ' ದರ್ಜೆ ನೌಕರರೆಂದು ಪರಿಗಣಿಸಲು ಸರ್ಕಾರವು ನಿರ್ಧರಿಸಿದೆಯೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು):–

ಅ. 10450 ಮಿತ ವೇತನದ ಹುದ್ದೆಗಳು

ಆ. ನಿಗದಿತ ಸಂಭಾವನೆ ಮಾಸಿಕ ರೂ. 600.00

ಇ. ಇಲ್ಲ

ಶ್ರೀ ಎಂ. ಕೆ. ಪಟ್ಟಣಶೆಟ್ಟಿ:– ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಗ್ರಾಮ ಸಹಾಯಕರುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 10,450 ಎಂದು ಹೇಳಿದ್ದಾರೆ. ಅವರ ಸಂಬಳ ಎಷ್ಟು ಎಂದು ಕೇಳಿದರೆ, ಮಾಸಿಕವಾಗಿ 600 ರೂ.ಗಳೆಂದು ಹೇಳಿದ್ದಾರೆ. ಅವರನ್ನು 'ಡಿ' ದರ್ಜೆಯ ನೌಕರರೆಂದು ಸರ್ಕಾರವು ಪರಿಗಣಿಸುವುದೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಗ್ರಾಮ ಸಹಾಯಕರು ಕಂದಾಯ ಇಲಾಖೆಯಲ್ಲಿ ಒಂದು ಪ್ರಮುಖವಾದ ಅಂಗ. ಅಂತಹವರಿಗೆ ಕೊಡುವ ಸಂಬಳ ಬಹಳ ಕಡಿಮೆಯಾಗಿದೆ. ಬೆಲೆಯೇರಿಕೆಯ ತುಟ್ಟಿ ದಿವಸಗಳಲ್ಲಿ ಅವರಿಗೆ ಆರುನೂರು ರೂಪಾಯಿ ಸಂಬಳ ಎಂದರೆ ಬಹಳ ಕಡಿಮೆಯಾಗುತ್ತದೆ. ಕನಿಷ್ಪಪಕ್ಷ ಅವರಿಗೆ ಒಂದು ಸಾವಿರವಾದರೂ ಸಂಬಳ ಕೊಡಬೇಕೆಂದು ಕೇಳುತ್ತೇನೆ. ಹಾಗೆಯೇ ಅವರಿಗೆ ನೌಕರಿ ಭದ್ರತೆ ಇಲ್ಲದಿದ್ದರೆ ಅವರ ಜೀವನಕ್ಕೆ ಬಹಳಷ್ಟು ತೊಂದರೆಯಾಗುತ್ತದೆ. ಅವರನ್ನು ಕನಿಷ್ಪ 'ಡಿ' ದರ್ಜೆ ನೌಕರರೆಂದು ಪರಿಗಣಿಸಬೇಕು ಮತ್ತು ಈ ದಿಸೆಯಲ್ಲಿ ತಾವು ಯೋಚನೆ ಮಾಡಬೇಕೆಂದು ಕೇಳಿಕೊಂಡು, ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರೆಂದು ಆಶಯ ಮಾಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:– ಅವರನ್ನು 'ಡಿ' ದರ್ಜೆಯಾಗಿ ಮಾಡಿದರೆ 18 ಕೋಟಿ ರೂಪಾಯಿ ನಷ್ಟವಾಗುತ್ತದೆ. ತಿಂಗಳಿಗೆ ಆರುನೂರು ರೂಪಾಯಿ ಸಂಬಳ ಕೊಡುವುದರಿಂದ 7 ಕೋಟಿ ಖರ್ಚಾಗುತ್ತದೆ. 11 ಕೋಟಿ ಫೈನಾನ್ಸಿಯಲ್ ಇಂಪ್ಲಿಕೇಶನ್ ಆಗುತ್ತದೆ. ಇದು ಮೂರನೆಯ ವೇತನಾ ಆಯೋಗದ ಮುಂದೆ ಹೋಗಿ ಅವರು ಶಿಫಾರಸ್ಸು ಮಾಡಿ ಕಳುಹಿಸಿದ್ದರು. ಕ್ಯಾಬಿನೆಟ್ ಸಬ್

ಕಮಿಟಿಯವರ ಮುಂದೆಯೂ ಕೂಡ ಹೋಗಿತ್ತು. ಆದರೆ ಅವರು ಕ್ರಮ ತೆಗೆದುಕೊಂಡಿಲ್ಲ. ಈಗ ನಾಲ್ಕನೇ ವೇತನಾ ಆಯೋಗಕ್ಕೆ ಮುಂದೆ ರೆಫರ್ ಮಾಡಿದ್ದೇವೆ. ಅದನ್ನು ಕಾದು ನೋಡೋಣ.

ಶ್ರೀ ಎಂ.ಕೆ. ಪಟ್ಟಣಶೆಟ್ಟಿ:– ಸಂಬಳವಾದರೂ ಜಾಸ್ತಿ ಮಾಡಿ.

ಶ್ರೀ ಎಂ.ವೈ. ಘೋರ್ಪಡೆ:– ನಾಲ್ಕನೇ ವೇತನಾ ಆಯೋಗದ ಅಭಿಪ್ರಾಯ ಬರುವವರೆಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಸಿದ್ದಯ್ಯ:– ಇವರು 10 ಸಾವಿರ ಜನ ಇದ್ದಾರೆಂದು ಹೇಳಿದ್ದೀರಿ. ಇವರಲ್ಲಿ ಎಸ್.ಸಿ. ಎಸ್.ಟಿ. ಜನ ಎಷ್ಟು ಇದ್ದಾರೆ ಮತ್ತು ಇದಕ್ಕೆ ಅಪಾಯಿಂಟಿಂಗ್ ಅಥಾರಿಟಿ ಯಾರು ?

ಶ್ರೀ ಎಂ.ವೈ. ಘೋರ್ಪಡೆ:– ಈ ಬ್ರೇಕ್‌ಅಪ್ ಫಿಗರ್ಸ್ ನನ್ನ ಹತ್ತಿರ ಇಲ್ಲ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಹಿಂದೆ ಹಣಕಾಸಿನ ಮಂತ್ರಿಯಾಗಿದ್ದವರು ಈಗ ಕಂದಾಯ ಮಂತ್ರಿಗಳಾಗಿದ್ದಾರೆ. ಈಗ 18 ಕೋಟಿ ಬೇಕಾಗುತ್ತದೆ ಎಂದು ಹೇಳಿದರು. ಈಗ ಕೊಡುತ್ತಿರುವುದು 7 1/2 ಕೋಟಿ ಎಂದು ಹೇಳಿದ್ದಾರೆ. ನಾನು ಗುಣಾಕಾರ ಮಾಡಿದೆ. 10450 x 12 x 600 ಮಾಡಿದರೆ ಅದು 7.524 ಕೋಟಿ ಬರುತ್ತದೆ. 7 ಕೋಟಿ ರೂಪಾಯಿ ಸಂಬಳ ಕೊಟ್ಟು, ಈಗ ನಮಗೆ 75 ಕೋಟಿ ಕಿರುಕುಳ ಕೊಡುತ್ತಿದ್ದೀರಿ. ಆ ಕಾರಣ ನನ್ನ ಸಲಹೆ, ಈಗ ಕಂಪ್ಯೂಟರೈಸ್ ಮಾಡುತ್ತೇವೆ, ಪಟ್ಟಾ ಪುಸ್ತಕ ಕೊಡುತ್ತೇವೆ ಎಂದು ಹೇಳುತ್ತಾರೆ. ನಮ್ಮಲ್ಲಿ ಕಂದಾಯ ವಸೂಲಾತಿಯಲ್ಲಿ ನಿಮ್ಮ ಅಪೇಕ್ಷೆ ಎಷ್ಟು ಇದೆ ಅದರಲ್ಲಿ ಅರ್ಧಭಾಗ ಕೂಡ ವಸೂಲಾತಿ ಆಗುತ್ತಿಲ್ಲ. ಕಂದಾಯ ವಸೂಲಿಗಿಂತ ಈ ಗ್ರಾಮ ಸಹಾಯಕರ ಸಂಬಳ ಜಾಸ್ತಿಯಾಗುತ್ತದೆ. ಗ್ರಾಮಲೆಕ್ಕಿಗಳು ಶನಿಗಳಾದರೆ ಇವರು ಉಪಶನಿಗಳು. ನನ್ನ ಸಲಹೆ ಎಂದರೆ ಶನಿಯೂ ಬೇಡ, ಉಪಶನಿಯೂ ಬೇಡ.

ಇದರಿಂದ ನಿಮಗೆ ಏಳೂವರೆ ಕೋಟಿ ಉಳಿತಾಯವಾಗುತ್ತದೆ. ಆದಷ್ಟು ಬೇಗ ನೀವು ಪಟ್ಟಾಪುಸ್ತಕ ಕೊಟ್ಟರೆ, ಇದರಿಂದಲೂ ಉಳಿತಾಯ ಮಾಡಬಹುದೆಂದು ನನ್ನ ಸಲಹೆ.

ಶ್ರೀ ಎಂ. ರಾಜಶೇಖರಮೂರ್ತಿ:– ಅವರ ಸಲಹೆ ಬೇರೆ ರೂಪದಲ್ಲಿರಬೇಕಾಗಿತ್ತು. ಅಂದರೆ, ಕಂದಾಯ ಬೇಡ, ಗ್ರಾಮ ಸಹಾಯಕರು ಬೇಡವೆಂದು, that would have been a better suggestion.

ಪೀಣ್ಯ ದಾಸರಹಳ್ಳಿ ಗ್ರಾಮಗಳಿಗೆ ಕುಡಿಯುವ ನೀರಿನ ಅಭಾವ

(2148): ಶ್ರೀ ಎಸ್. ರಮೇಶ್ (ಉತ್ತರಹಳ್ಳಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಪೀಣ್ಯ ದಾಸರಹಳ್ಳಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

2. ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

1. ಬಂದಿದೆ.

2. ಅ) ಪೀಣ್ಯ: